# ಗಾಂಧಿನಗರ ಪೋಸ್ಟ್



## 'ಲೀಡರ್' ರೆಡಿ!

'ಮಾಸ್ ಲೀಡರ್' ಚಿತ್ರದ ಕುರಿತ ನಿರೀಕ್ಷೆ–ಕುತೂಹಲ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಶಿವರಾಜ್ ಕುಮಾರ್ ಸೇನಾ ಅಧಿಕಾರಿಯ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾ ಪ್ರಚಲಿತ ವಿದ್ಯಮಾನಗಳ ಕುರಿತು ಮಾತನಾಡಲಿದೆಯಂತೆ.

ಸಹನಾ ಮೂರ್ತಿ 'ಮಾಸ್ ಲೀಡರ್' ಚಿತ್ರದ ನಿರ್ದೇಶಕರು. ಕರ್ನಾಟಕದ ಜೊತೆಗೆ ಕಾಶ್ಮೀರ ಹಾಗೂ ಖತಾರ್‌ಗಳಲ್ಲಿ ಚಿತ್ರೀಕರಣ ನಡೆಸಿರುವ ನಿರ್ದೇಶಕರು, ಈ ಚಿತ್ರವನ್ನು ತಮ್ಮ ವೃತ್ತಿಜೀವನದ ಮಹತ್ವಾಕಾಂಕ್ಷೆಯ ಸಿನಿಮಾ ಎಂದು ಪರಿಗಣಿಸಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ನಾಯಕತ್ವದ ಕೊರತೆ ಎದುರಾಗಿರುವ ದಿನಗಳಲ್ಲಿ, ನಿಜವಾದ ನಾಯಕನೊಬ್ಬ ಹೇಗಿರಬೇಕು ಎನ್ನುವುದನ್ನು ತಮ್ಮ ಚಿತ್ರದ ಮೂಲಕ ಹೇಳಲು ಅವರು ಪ್ರಯತ್ನಿಸಿದ್ದಾರೆ. ಇತ್ತೀಚೆಗಷ್ಟೇ ಅದ್ದೂರಿ ಸಮಾರಂಭದಲ್ಲಿ ತೆಲುಗಿನ ಹಿರಿಯ ನಟ ಬಾಲಕೃಷ್ಣ ಅವರು ಚಿತ್ರದ ಹಾಡುಗಳನ್ನು ಬಿಡುಗಡೆ ಮಾಡಿದ್ದು, ವೀರ್ ಸಮರ್ಥ್ ಸಂಗೀತ ಸಂಯೋಜನೆಯ ಗೀತೆಗಳು ಚಿತ್ರರಸಿಕರ ತುಟಿಗಳಲ್ಲಿ ನಿಧಾನವಾಗಿ ಮರುದನಿಸುತ್ತಿವೆ.

ಪ್ರಣೀತಾ ಸುಭಾಷ್ ಚಿತ್ರದ ನಾಯಕಿ. ಕನ್ನಡದ ಈ ಚೆಲುವೆ ಈಗ ತೆಲುಗು ಚಿತ್ರರಂಗದಲ್ಲಿ ಬೇಡಿಕೆಯ ಕಲಾವಿದೆ. ಪತ್ರಕರ್ತೆಯಾಗಿ ಕಾಣಿಸಿಕೊಂಡಿರುವ ಶರ್ಮಿಳಾ ಮಾಂಡ್ರೆ ಹಾಗೂ ನಟ ಶ್ರೀನಗರ ಕಿಟ್ಟಿ ಅವರ ಪುತ್ರಿ ಬೇಬಿ ಪರಿಣಿತಾ ಅವರ ಪಾತ್ರಗಳಿಗೂ ಚಿತ್ರದಲ್ಲಿ ಹೆಚ್ಚು ಮಹತ್ವವಿದೆಯಂತೆ. ವಿಜಯ ರಾಘವೇಂದ್ರ, ಗುರುರಾಜ್, ಯೋಗಿ ನಟಿಸುವ ಮೂಲಕ ಈ ಚಿತ್ರದ ತಾರಾಗಣಕ್ಕೆ ವಿಶೇಷ ಆಕರ್ಷಣೆಯಿದೆ.

## ಮುತ್ತು ಹೆಕ್ಕುತ್ತ...

ಎ.ಪಿ. ಅರ್ಜುನ್ ಕನ್ನಡ ಚಿತ್ರರಂಗದ ಭರವಸೆಯ ಯುವ ನಿರ್ದೇಶಕರಲ್ಲೊಬ್ಬರು. ಅವರ ನಿರ್ದೇಶನದ 'ಅಂಬಾರಿ' ಹಾಗೂ 'ಅದ್ದೂರಿ' ಚಿತ್ರಗಳು ದೊಡ್ಡ ಯಶಸ್ಸು ಕಂಡಿದ್ದರೆ, 'ಐರಾವತ' ಹಾಗೂ 'ರಾಟೆ' ಚಿತ್ರಗಳು ಭಿನ್ನ ನಿರೂಪಣೆ, ದೃಶ್ಯ ವೈಭವ ಹಾಗೂ ಅದ್ದೂರಿತನದಿಂದ ಗಮನಸೆಳೆದಿದ್ದವು. ನಿರೂಪಣೆಯಲ್ಲಿ ತಮ್ಮದೇ ಶೈಲಿ ಕಂಡುಕೊಳ್ಳಲು ಯತ್ನಿಸುತ್ತಿರುವ ಈ ನಿರ್ದೇಶಕರ ಹೊಸ ಸಿನಿಮಾ 'ಕಿಸ್'.

ಅರ್ಜುನ್ ಹೊಸ ಚಿತ್ರಕ್ಕಾಗಿ ಹೊಸ ಪ್ರತಿಭೆಗಳನ್ನು ನೆಚ್ಚಿಕೊಂಡಿದ್ದಾರೆ. ವಿರಾಟ್ ಚಿತ್ರದ ನಾಯಕ. ನಾಯಕನಾಗಿ ಗಾಂಧಿನಗರಕ್ಕೆ ಪರಿಚಯಗೊಳ್ಳುತ್ತಿರುವ ಪುಳಕ ಅವರದು. ಶ್ರೀಲೀಲಾ ಚಿತ್ರದ ನಾಯಕಿ. ಆಡಿಷನ್‌ನಲ್ಲಿ ಸುಮಾರು ಇನ್ನೂರು ಹುಡುಗಿಯರನ್ನು ಹಿಂದಿಕ್ಕಿ ಚಿತ್ರಕ್ಕೆ ಆಯ್ಕೆಯಾದ ಸಾಧನೆ ಅವರದು. ಈ ಹೊಸ ಜೋಡಿ ಕನ್ನಡ ಚಿತ್ರರಸಿಕರಿಗೆ ಇಷ್ಟವಾಗಲಿದೆ ಎನ್ನುವ ನಿರೀಕ್ಷೆ ನಿರ್ದೇಶಕರದು.

ಗೋವಾದ ಹೊರಾಂಗಣದಲ್ಲಿ 'ಕಿಸ್' ಚಿತ್ರದ ಚಿತ್ರೀಕರಣವನ್ನು ಅರ್ಜುನ್ ಇತ್ತೀಚೆಗೆ ನಡೆಸಿದ್ದಾರೆ. ಸುಮಾರು ಹತ್ತು ದಿನಗಳ ಕಾಲ ನಡೆದಿರುವ ಚಿತ್ರೀಕರಣದಲ್ಲಿ ಕಡಲಿನ ಮೊರೆತ, ಲಲನೆಯರೊಂದಿಗೆ ಪೈಪೋಟಿ ನಡೆಸುವಂತೆ ಕಾಣಿಸುವ ಅಲೆಗಳ ಲಾಸ್ಯ, ತರುಣ ತರುಣಿಯರ ಯೌವನದ ಬಿಸುಪು ಸೆರೆಯಾಗಿವೆ. ಶ್ರೀಮಂತ ಕುಟುಂಬದ ನಾಯಕನ ಬದುಕಿನ ಕೆಲವು ಚಿತ್ರಗಳು ಗೋವಾದ ಪರಿಸರದಲ್ಲಿ ನಿರ್ದೇಶಕರು ಚಿತ್ರೀಕರಿಸಿದ್ದಾರೆ. ನಂತರದ ದಿನಗಳಲ್ಲಿ ಬೆಂಗಳೂರು, ಊಟಿಯಲ್ಲಿ ಚಿತ್ರೀಕರಣ ಮುಂದುವರೆಯಲಿದೆ. ಈ ಯಾನ ನೋಡಿದರೆ, ಅರ್ಜುನ್‌ರ ಹಿಂದಿನ ಸಿನಿಮಾಗಳಂತೆ 'ಕಿಸ್' ಚಿತ್ರದಲ್ಲಿ ಕೂಡ ಒಂದು ಸುಂದರ ಜರ್ನಿ ಇರುವುದು ಖಚಿತವಾಗಿದೆ.

ಗಿರೀಶ್ ಗೌಡ ಛಾಯಾಗ್ರಹಣ ಹಾಗೂ ಹರಿಕೃಷ್ಣರ ಸಂಗೀತ ಸಂಯೋಜನೆ ಚಿತ್ರಕ್ಕಿದೆ. ಅನಂತನಾಗ್ ಹಾಗೂ ಸಾಧು ಕೋಕಿಲ ತಾರಾಗಣದಲ್ಲಿರುವ ಪ್ರಮುಖರು.

